ವಂಥ ಕೆಲಸವನ್ನು ಮಾಡುತ್ತೇನೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದರ ಜೊತೆಗೆ ಹೇಳುವುದೇನೆಂದರೆ, ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರ ಘೋಷಣೆ ಮಾಡಿದೆ. ಇದರ ಜೊತೆಗೆ ನಮ್ಮ ಸರ್ಕಾರ ಸೇರಿ ಘೋಷಣೆ ಮಾಡಿದೆ. ಆದ್ದರಿಂದ, ಇದರ ಬಗ್ಗೆ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ನಿರ್ಧಾರವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಅಭಯಚಂದ್ರ ಜೈನ್ : ಮಾನ್ಯ ಅಧ್ಯಕ್ಷರೆ, ಅದಕ್ಕೆ 100 ರೂಪಾಯಿ ಕಾಸ್ಟ್ ಬೀಳುತ್ತದೆ. ಕನಿಷ್ಠ 125 ರೂಪಾಯಿ ಮಾಡಬೇಕೆಂಬುದು ಅಲ್ಲಿನ ರೈತರ ಬೇಡಿಕೆ ಇದೆ. ಆದ್ದರಿಂದ, ಇದಕ್ಕೆ ಸರ್ಕಾರ ಸ್ವಲ್ಪವಾದರೂ ಸ್ಪಂದಿಸಬೇಕು. ಮತ್ತು ಕ್ಯಾಂಪ್ಕೋರವರು ಅಡಿಕೆಯ ಗುಣಮಟ್ಟವನ್ನು ಪರಿಶೀಲನೆ ಮಾಡಿ ಖರೀದಿ ಮಾಡುತ್ತಾರೆ. ಆದರೆ, ಈಗ ಒಳ್ಳೆ ಗುಣಮಟ್ಟದ ಅಡಿಕೆ ಬರುತ್ತಿಲ್ಲ. ಏಕೆಂದರೆ, ಅಲ್ಲಿ ವಿಶೇಷವಾದ ಮಳೆ ಬಂದು ಅಡಿಕೆಯಲ್ಲಾ ನೆನೆದು ಹೋಗಿದೆ. ಈಗಲೂ ಕೂಡ ಅಕಾಲಿಕ ಮಳೆ ಬಂದು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಡಿಕೆಯನ್ನು ಒಣಗಿಸುವುದಕ್ಕೂ ಕೂಡ ಸಾಧ್ಯವಾಗದ ಪರಿಸ್ಥಿತಿ ಅಲ್ಲಿದೆ. ರೈತರು ಒಂದು ಗೋಣಿ ಅಡಿಕೆಯನ್ನು ತೆಗೆದುಕೊಂಡು ಹೋಗುತ್ತಾರೆ. ಆದರೆ, ಅಡಿಕೆ ಗುಣಮಟ್ಟ ಪರಿಶೀಲನೆ ಮಾಡಿ ಎರಡು ದಿವಸ ಅಲ್ಲಿಯೇ ಇಟ್ಟು ಆನಂತರ ಬೆಲೆ ನಿಗದಿ ಮಾಡುವಂತ ಪರಿಸ್ಥಿತಿ ಇದೆ. ಆದ್ದರಿಂದ, ಬೆಲೆಯನ್ನು ಕನಿಷ್ಠ 100 ರೂಪಾಯಿಗಾದರೂ ಏರಿಸುವಂಥ ಕೆಲಸ ಮಾಡಿದರೆ ಜನರಿಗೆ ಉಪಯೋಗವಾಗುತ್ತದೆ. ಬೆಂಬಲ ಬೆಲೆಯನ್ನು ಹೆಚ್ಚು ಮಾಡಬೇಕೆಂದು ಪುತ್ತೂರಿನಲ್ಲಿ 29ನೇ ತಾರೀಖಿನ ದಿವಸ ರೈತರು ದೊಡ್ಡ ರ್ಯಾಲಿಯನ್ನು ಹಮ್ಮಿಕೊಂಡಿದ್ದಾರೆ. ಆದ್ದರಿಂದ, ಸ್ವಲ್ಪಮಟ್ಟಿಗಾದರೂ ಸರ್ಕಾರ ಅದರ ಬಗ್ಗೆ ಸ್ಪಂದಿಸುವಂಥ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಶಿವರಾಜ್ ತಂಗಡಗಿ (ಕೃಷಿ ಮಾರುಕಟ್ಟೆ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಅಧಿಕಾರಿಗಳ ಜೊತೆ ಚರ್ಚಿಸಿ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಆ) ವಿಷಯ : ಸರ್ಕಾರಿ ಕಾರ್ಯಕ್ರಮಗಳಲ್ಲಿ ಶಿಷ್ಟಾಚಾರ ನಿಗದಿ ಪಡಿಸುವ ಬಗ್ಗೆ.

ಶ್ರೀ ಪಿ.ಎಂ. ಅಶೋಕ್ (ರಾಮದುರ್ಗ) : ಮಾನ್ಯ ಅಧ್ಯಕ್ಷರೆ, ಸರ್ಕಾರಿ ಕಾರ್ಯಕ್ರಮಗಳಲ್ಲಿ ಶಿಷ್ಟಾಚಾರ ಉಲ್ಲಂಘನೆ ಆಗುತ್ತಿದೆ ಎಂದು ನಾನು ಕಳೆದ

ಬಾರಿ ಕೂಡ ಪ್ರಸ್ತಾಪ ಮಾಡಿದ್ದೇನೆ. ಇನ್ನು ಮುಂದೆ ಸರಿಯಾಗಿ ನಡೆದುಕೊಳ್ಳುವುದಕ್ಕೆ ನಿರ್ದೇಶನ ಕೊಡುತ್ತೇನೆಂದು ಮಾನ್ಯ ಸಚಿವರು ಇಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ, 16ನೇ ತಾರೀಖಿನ ದಿವಸ ನೂತನ ಗ್ರಾಮ ಪಂಚಾಯಿತಿ ಕಟ್ಟಡದ ಅಡಿಗಲ್ಲು ಸಮಾರಂಭದಲ್ಲಿಯೂ ಕೂಡ ಶಿಷ್ಟಾಚಾರ ಉಲ್ಲಂಘನೆಯಾಗಿದೆ. ಈ ಶಿಷ್ಟಾಚಾರದ ಬಗ್ಗೆ ಸರ್ಕಾರದ ಕಡೆಯಿಂದ ಕ್ಲಾರಿಫಿಕೇಷನ್ ಬೇಕಾಗಿದೆ. ತಾಲ್ಲೂಕಿನಲ್ಲಿರುವ ಒಂದೇ ಪಕ್ಷದ ಮಾಜಿ ಶಾಸಕರು ಅಥವಾ ತಾಲ್ಲೂಕಿನಲ್ಲಿರುವ ಎಲ್ಲಾ ಪಕ್ಷದ ಮಾಜಿ ಶಾಸಕರುಗಳ ಹೆಸರು ಸರ್ಕಾರಿ ಕಾರ್ಯಕ್ರಮದಲ್ಲಿ ಹಾಕಬೇಕೇ ಅಥವಾ ಬೇಡವೇ ಎಂದು ದಯವಿಟ್ಟು ಕ್ಲಾರಿಫಿಕೇಷನ್ ಅನ್ನು ತಕ್ಷಣ ಕೊಟ್ಟರೆ ಒಳ್ಳೆಯದು. ತಾಲ್ಲೂಕಿನಲ್ಲಿ ಮಾಜಿ ಶಾಸಕರ ಅಭಿಮಾನಿಗಳ ಸಂಘ ಮಾಡಿಕೊಂಡು ತಮಗೆ ಬೇಕಾದವರ ಹೆಸರುಗಳನ್ನು ಹಾಕಿಕೊಳ್ಳುತ್ತಿದ್ದಾರೆ. ರಾಮದುರ್ಗ ತಾಲ್ಲೂಖಿನಲ್ಲಿರುವ ಚಿಮ್ಮಲಕಟ್ಟೆ ಗ್ರಾಮ ಪಂಚಾಯಿತಿಯ ನೂತನ ಕಟ್ಟಡದ ಸಮಾರಂಭಕ್ಕೆ ಮಾಜಿ ಶಾಸಕರ ಹೆಸರನ್ನು ಸಹ ಹಾಕಿದ್ದಾರೆ. ಅವರು ಶಾಸಕರಾಗಿದ್ದಂಥ ಸಂದರ್ಭದಲ್ಲಿ ನನ್ನ ಹೆಸರು ಹಾಕಿಕೊಂಡಿದ್ದಾಗ ಅವರು ಆಕ್ಷೇಪಣೆ ಮಾಡಿರುವಂಥ ವಿಚಾರ ತಮ್ಮೆಲ್ಲರ ಗಮನಕ್ಕೂ ಕೂಡ ಬಂದಿದೆ. ಈ ವಿಷಯವನ್ನು ನಾನು ಕಳೆದ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಆದ್ದರಿಂದ, ಶಿಷ್ಟಾಚಾರದ ಬಗ್ಗೆ ದಯವಿಟ್ಟು ಸೂಕ್ತ ನಿರ್ದೇಶನವನ್ನು ಬಹಳ ಬೇಗ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈ ಪ್ರೊಟೋಕಾಲ್ ವಿಷಯ ಆಗಾಗ ಚರ್ಚೆಗೆ ಬರುತ್ತಿದೆ.

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪೌರಾಡಳಿತ ಸಚಿವರು) : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಆಗಾಗ ಇಲ್ಲಿ ಚರ್ಚೆಗೆ ಬರುತ್ತಿದೆ. ಗ್ರಾಮ ಪಂಚಾಯಿತಿ ಅಡಿಗಲ್ಲು ಸಮಾರಂಭಕ್ಕೋಸ್ಕರ ಒಂದು ಆಮಂತ್ರಣ ಪತ್ರಿಕೆಯನ್ನು ಹೊರಡಿಸಿದ್ದಾರೆ. ಆ ಆಮಂತ್ರಣ ಪತ್ರಿಕೆಯಲ್ಲಿ 'ಶಿಲಾನ್ಯಾಸ' ಸನ್ಮಾನ್ಯ ಶ್ರೀ ಅಶೋಕ್ ಎಂ. ಪಟ್ಟಣ, ಜನಪ್ರಿಯ ಶಾಸಕರು, ರಾಮದುರ್ಗ ಎಂದು ಇದೆ. ಗ್ರಾಮ ಪಂಚಾಯಿತಿ ಯವರು ಈ ಆಮಂತ್ರಣ ಪತ್ರಿಕೆಯನ್ನು ಮಾಡಿಸಿದ್ದಾರೆ. ಅದರಲ್ಲಿ ಮಾಜಿ ಶಾಸಕರ ಹೆಸರು ಮತ್ತು ಸನ್ಮಾನ್ಯ ಶ್ರೀ ಸಚಿನ್‌ಗೌಡ ಎಂ.ಪಾಟೀಲ್, ಊರಿನ ಗಣ್ಯರು ಎಂದು ಇದೆ. ಶ್ರೋ ಸಿ.ಎಸ್. ನಾಯಕ್, ಗಣ್ಯರು, ಶ್ರೀ ಕುಲಿಗೌಡ,

ಊರಿನ ನಾಗರೀಕರು, ಶ್ರೀ ಬಿಜ್ಜಣನವರ್, ಊರಿನ ನಾಗರಿಕರು ಎಂದು ಎಲ್ಲರ ಹೆಸರನ್ನು ಆಮಂತ್ರ ಪತ್ರಿಕೆಯಲ್ಲಿ ಹಾಕಿಸಿದ್ದಾರೆ. ಅಲ್ಲಿನ ಶಿಲಾನ್ಯಾಸವನ್ನು ತಮ್ಮ ಕೈಯಲ್ಲಿ ಮಾಡಿಸಿದ್ದಾರೆ. ಇಷ್ಟಾಗಿಯೂ ಕೂಡ ಇದರ ಬಗ್ಗೆ ಎಲ್ಲರಿಗೂ ಸಹ ಸುತ್ತೋಲೆಯನ್ನು ಕಳುಹಿಸಿಕೊಟ್ಟು ಇನ್ನೊಂದು ಸಾರಿ ಹೇಳುತ್ತೇವೆ. ಮಾನ್ಯ ಸದಸ್ಯರೆ ಕಟ್ಟಡಕ್ಕೆ ಶಿಲಾನ್ಯಾಸ ಮಾಡುತ್ತಿದ್ದಾರೆ. ಇದರ ಜೊತೆಗೆ ಸದರಿ ಆಮಂತ್ರಣ ಪತ್ರಿಕೆಯನ್ನು ಗ್ರಾಮ ಪಂಚಾಯಿತಿಯಿಂದ ಹೊರಡಿಸಲಾಗಿದೆ. ಆದ್ದರಿಂದ, ಊರಿನ ಎಲ್ಲರ ಹೆಸರುಗಳನ್ನು ಇದರಲ್ಲಿ ಹಾಕಿದ್ದಾರೆ. ಇದೊಂದು ವೋಟರ್ಸ್ ಲಿಸ್ಟ್, ಟೆಲಿಫೋನ್ ಡೈರೆಕ್ಟರಿ ರೀತಿಯಲ್ಲಿದೆ. ಇದರಲ್ಲಿ ಶಾಸಕರನ್ನು ಬಿಟ್ಟಿಲ್ಲ, ಅವರ ಕೈಯಲ್ಲಿಯೇ ಶಿಲಾನ್ಯಾಸ ಕೆಲಸ ಮಾಡಿಸಿದ್ದಾರೆ. ಆದರೂ ಕೂಡ ಅವರಿಗೆ ನಾವು ಮತ್ತೊಂದು ಸಾರಿ ಡೈರೆಕ್ಷನ್ ಕೊಡುತ್ತೇವೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಇದರಲ್ಲಿ ಮಾಜಿ ಶಾಸಕರ ಹೆಸರನ್ನು ಹಾಕಬಹುದೆ? ಹಾಕುವುದಾದರೆ ಎಲ್ಲರ ಹೆಸರನ್ನು ಹಾಕಿಸಿ, ನಮದೇನೂ ಅಭ್ಯಂತರ ಇಲ್ಲ. ಮಾನ್ಯ ಸದಸ್ಯರಿಗೆ ಈ ರೀತಿಯಾಗಿ ಎರಡೆರಡು ಸಾರಿ ಮಾಡಿದರೆ ಹೇಗೆ? ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಬಿ.ಸಿ.ಪಾಟೀಲ್ : ಗ್ರಾಮಪಂಚಾಯಿತಿ ಕಾರ್ಯದರ್ಶಿ ಸರ್ಕಾರದ ಪರವಾಗಿಯೇ ಮಾಡಿಸುತ್ತಾರೆ.

ಅಧ್ಯಕ್ಷರು : ಸುತ್ತೋಲೆ ಕೊಡುತ್ತೇನೆಂದು ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ಪಿ.ಎಂ. ಅಶೋಕ್ : ಮಾನ್ಯ ಕಾನೂನು ಮಂತ್ರಿಯವರ ಗಮನಕ್ಕೆ ತರುವುದೇನೆಂದರೆ, ಮೊನ್ನೆ ದಿವಸ ನಡೆದ ಎಪಿಎಂಸಿ ಕಾರ್ಯಕ್ರಮದಲ್ಲಿ ಬಿಜೆಪಿ ಅಧ್ಯಕ್ಷರ ಹೆಸರನ್ನು ಸಹ ಹಾಕಲಾಗಿತ್ತು. ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ತಾವು ಹೇಳಿದ್ದೀರಿ. ಆದರೆ, ಇದುವರೆಗೂ ಏನು ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಜೆ.ಡಿ.ನಾಯಕ್ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂಥ ಆದೇಶ ನಮಗೆ ಕಳುಹಿಸಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ಕಳುಹಿಸಿಕೊಡುತ್ತೇನೆ.